# ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ.

ಪ್ರಧಾನ ಕಛೇರಿ, ಹೊಸಪೇಟೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :**443**/2020-21 ದಿ:04.06.2020

**ಗುತ್ತಿಗೆ ಅಧಿಸೂಚನೆ**

ದೂರವಾಣಿ : 08394 – 228208, 228209

---

ಕ್ರಸಂ: ಮುಕಾಅ/ಬಜಿಸಕೇಬ್ಯಾನಿ/ಹೊ/2020-21/ ದಿನಾಂಕ: 04.06.2020

ಲೋಕೋಪಯೋಗಿ ಇಲಾಖೆಯಲ್ಲಿ 2019-20ನೇ ಸಾಲಿನ ನವೀಕೃತ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document** ನಂತೆ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಈ ಕೆಳಗೆ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಮತ್ತು ಟೆಂಡರ್ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಟೆಂಡರ್ ವಿವರಗಳು ಈ ಕೆಳಗಿನಂತಿವೆ.

| ಕ್ರ ಸಂ | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ (ರೂ. ಗಳಲ್ಲಿ) | ಮುಂಗಡ ಠೇವಣಿ (ರೂ.ಗಳಲ್ಲಿ) | ಕಾಲಮಿತಿ (ಮಳೆಗಾಲ ಸಹಿತ) | ಗುತ್ತಿಗೆದಾರರ ದರ್ಜೆ |
|---|---|---|---|---|---|
| 01. | ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ತೋರಣಗಲ್ಲು ಗ್ರಾಮದಲ್ಲಿ ಬ್ಯಾಂಕಿನ ಶಾಖಾ ಕಟ್ಟಡ ನಿರ್ಮಾಣ | 65,35,000-00 | 1,31,000-00 | 09 ತಿಂಗಳು | 1 ನೇ ದರ್ಜೆ |
| 02 | Construction of Proposed CAR SHED, BOOK AND FORM ROOM AND LADIES REST ROOM GROUND FLOOR AND FIRST FLOOR BUILDING @ HEAD OFFICE PREMISES, BDCC BANK | 68,80,000-00 | 1,37,000-00 | 09 ತಿಂಗಳು | 1 ನೇ ದರ್ಜೆ |

**Note**:

1. The amount put to tender consist of the following.

   a) Amount Excluding GST **1) Rs. 58.35 Lakhs 2) Rs. 61.29 Lakhs** The bidder should quote for this amount.

   b) GST Amount **1) Rs.07.00 Lakhs2) Rs. 07.35 Lakhs.** The financial bid evaluation will be based on 1(a) above.

| ಕ್ರಮ ಸಂ | ಟೆಂಡರ್ ಪ್ರಕ್ರಿಯೆಯ ವಿವರಗಳು. | ಸಮಯ ಮತ್ತು ದಿನಾಂಕ |
|---|---|---|
| **1** | **Pre Bid Meeting** ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಕಛೇರಿ, ಬಿ ಡಿ ಸಿ ಸಿ ಬ್ಯಾಂಕ್ ನಿ. ಹೊಸಪೇಟೆ | **ದಿ: 14-07-2020 ರಂದು 11.00 AM ಗಂಟೆಯವರೆಗೆ.** |
| **2** | **ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ದಿನಾಂಕ ಮತ್ತು ಸಮಯ:** | **ದಿ: 17-07-2020 ರಂದು ಸಾಯಂಕಾಲ: 4.00 PM., ಗಂಟೆಯವರೆಗೆ.** |

| | | |
|---|---|---|
| 3 | ಭರ್ತಿ ಮಾಡಿ ಹಾಕಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ. | ದಿ: 18-07-2020 ರಂದು ಸಾಯಂಕಾಲ: 4.30 PM., ಗಂಟೆಯಿಂದ ಕಾರ್ಯನಿರ್ವಹಣಾ ಅಧಿಕಾರಿಗಳ ಕಛೇರಿ, ಬಿ.ಡಿ.ಸಿ.ಸಿ. ಬ್ಯಾಂಕ್ ನಿ. ಹೊಸಪೇಟೆ |
| 4 | ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ, | ದಿ: 21-07-2020 ರಂದು ಕಾರ್ಯನಿರ್ವಹಣಾ ಅಧಿಕಾರಿಗಳ ಕಛೇರಿ, ಬಿ.ಡಿ.ಸಿ.ಸಿ. ಬ್ಯಾಂಕ್ ನಿ. ಹೊಸಪೇಟೆ |

**ಷರತ್ತುಗಳು:**

| | |
|---|---|
| 01. | ಟೆಂಡರ್ ಹಾಕಲು ಇಚ್ಛಿಸುವ ಗುತ್ತಿಗೆದಾರರು ಮೇಲಿನ ಪ್ರತಿ ಕೆಲಸಗಳ ಅಂದಾಜು ಮೊತ್ತದ ಶೇಕಡ 50ರ ಮೊತ್ತಕ್ಕೆ ಕಡಿಮೆ ಇರದಂತೆ ಕಟ್ಟಡ ಕಾಮಗಾರಿಯನ್ನು ಕಳೆದ ಐದು ಆರ್ಥಿಕ ವರ್ಷಗಳಲ್ಲಿನ ಯಾವುದಾದರೂ ಒಂದು ಆರ್ಥಿಕ ವರ್ಷದ ಅವಧಿಯಲ್ಲಿ ಯಶಸ್ವಿಯಾಗಿ ಮಾಡಿ ಮುಗಿಸಿದ ಬಗ್ಗೆ ಸಂಬಂಧಿಸಿದ ಕಾರ್ಯನಿರ್ವಾಹಕ ಅಭಿಯಂತರರು ಅಥವಾ ತತ್ಸಮ ಪ್ರಾಧಿಕಾರದಿಂದ ದೃಢೀಕರಣ ಪತ್ರದ ಪಡೆದು ಟೆಂಡರ್ ಫಾರಂ ಗಾಗಿ ಕೋರಿಕೆ ಸಲ್ಲಿಸುವಾಗ ಲಗತ್ತಿಸಬೇಕು. |
| 02. | ಗುತ್ತಿಗೆದಾರರು ಕನಿಷ್ಠ 2 ಆರ್ಥಿಕ ವರ್ಷಗಳಲ್ಲಿ ಟೆಂಡರಿಗಿಟ್ಟ ಮೊತ್ತಕ್ಕೆ ಸಮನಾಗಿ ಅಥವಾ ಹೆಚ್ಚಿನ ಆರ್ಥಿಕ ವ್ಯವಹಾರ (Financial Turnover) ನಡೆಸಿರಬೇಕು. ಈ ಕುರಿತು ಚಾರ್ಟರ್ಡ್ ಅಕೌಂಟೆಂಟ್‌ರಿಂದ ಪ್ರಮಾಣ ಪತ್ರ ಲಗತ್ತಿಸಬೇಕು. |
| 03. | ಗುತ್ತಿಗೆದಾರರು ಟೆಂಡರ್ ಕಾಮಗಾರಿ ಅಂದಾಜು ಮೊತ್ತದ ಶೇಕಡ 30% ರಷ್ಟು **LOC** ಪತ್ರವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಕಾಮಗಾರಿ ಹೆಸರಿನೊಂದಿಗೆ ಪಡೆದು ಕಡ್ಡಾಯವಾಗಿ ಲಗತ್ತಿಸುವುದು. |
| 04. | ಗುತ್ತಿಗೆದಾರರು ಹಿಂದಿನ 5 ಆರ್ಥಿಕ ವರ್ಷಗಳಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು. |
| 05. | ಗುತ್ತಿಗೆದಾರರ ಸಾಮರ್ಥ್ಯ (Tender Capacity) ಕುರಿತಂತೆ ಇರುವ ಲೆಕ್ಕಾಚಾರದ ವಿವರಗಳನ್ನು ನಿಖರವಾಗಿ ತುಂಬಿ ಸಲ್ಲಿಸುವುದು ಅದರಂತೆ ಬರುವ ಮೊತ್ತವು ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಿದ್ದಲ್ಲಿ ಮಾತ್ರ ಅಂತಹ ಗುತ್ತಿಗೆದಾರರು ಅರ್ಹತೆ ಪಡೆಯುತ್ತಾರೆ. |

ಪುಟ 2 ಕ್ಕೆ



| | |
|---|---|
| 06. | ಗುತ್ತಿಗೆದಾರರು ಹಾಲಿ ನಿರ್ವಹಿಸುತ್ತಿರುವ ಕಾಮಗಾರಿಗಳ ವಿವರಗಳನ್ನು ನಿಗದಿತ ನಮೂನೆ 1.3 (A) ಮತ್ತು 1.3 (B), 1.4 (A & B) ಕಡ್ಡಾಯವಾಗಿ ನೀಡುವುದು. |
| 07. | ಯಾವುದೇ ಕಾರಣವನ್ನು ನೀಡದೇ ಅರ್ಜಿಯನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಇರುತ್ತದೆ. ಮೇಲೆ ಹೇಳಿದ ಯಾವುದೇ ದಿನಾಂಕದಂದು ಸಾರ್ವತ್ರಿಕ ರಜೆಯೆಂದು ಪರಿಗಣಿಸಿದ್ದಲ್ಲಿ ಅದರ ಮುಂದಿನ ಕೆಲಸದ ದಿನದ ದಿನಾಂಕವನ್ನು ಪರಿಗಣಿಸಲಾಗುವುದು. |
| 08. | ಗುತ್ತಿಗೆದಾರರು ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವಾಗ ಗುತ್ತಿಗೆದಾರರ ನೋಂದಣಿ ಪ್ರಮಾಣ ಪತ್ರ, ವ್ಯಾಟ್ ನೋಂದಣಿ ಪತ್ರ, ಇತ್ತೀಚಿನ ವ್ಯಾಟ್ ಕ್ಲಿಯರೆನ್ಸ್ ಪ್ರಮಾಣ ಪತ್ರ ಮತ್ತು ಪ್ಯಾನ್ ರಿಜಿಸ್ಟ್ರೇಷನ್ ಜೆರಾಕ್ಸ ಪ್ರತಿ ಲಗತ್ತಿಸಬೇಕು. |
| 09. | ಗುತ್ತಿಗೆದಾರರು ಈ ಕೆಲಸಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸ್ವತ: ಖರೀದಿಸಿ ಸೂಕ್ತವಾದ ಗುಣಮಟ್ಟದ ಪರೀಕ್ಷಾ ವರದಿ (Test Report) ಸಲ್ಲಿಸಬೇಕು. |
| 10. | ಕಾಮಗಾರಿಗೆ ಅವಶ್ಯವುಳ್ಳ ಕಾಂಕ್ರೀಟ್ ಮಿಕ್ಸರ್ ಇತ್ಯಾದಿ ಯಂತ್ರೋಪಕರಣಗಳನ್ನು ಸ್ವಂತ ಹೊಂದಿದ ಬಗ್ಗೆ ಅಥವಾ ಬಾಡಿಗೆ ಆಧಾರದ ಮೇಲೆ ಹೊಂದಿರುವ ಬಗ್ಗೆ ದೃಢೀಕರಣ ಪತ್ರ ಟೆಂಡರಿನೊಂದಿಗೆ ಕಡ್ಡಾಯವಾಗಿ ಲಗತ್ತಿಸುವುದು. |
| 11. | ಯಾವುದೇ ಗುತ್ತಿಗೆದಾರರು ಟೆಂಡರಿನ ಮೊತ್ತವು ಟೆಂಡರಿಗಿಟ್ಟ ಮೊತ್ತಕ್ಕಿಂತ ಕಡಿಮೆ ಇದ್ದಲ್ಲಿ ಸದರಿ ಗುತ್ತಿಗೆದಾರರು ಟೆಂಡರು ಕರಾರು ಮಾಡಿಕೊಳ್ಳುವ ಪೂರ್ವದಲ್ಲಿ ವ್ಯತ್ಯಾಸದ ಮೊಬಲಗನ್ನು ಠೇವಣಿ ರೂಪದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹೆಸರಿನಲ್ಲಿ ಜಮಾ ಮಾಡತಕ್ಕದ್ದು. |
| 12. | ಯಾವುದೇ ಕಾರಣಗಳನ್ನು ನೀಡದೇ ಟೆಂಡರುಗಳನ್ನು ಹಾಗೂ ಟೆಂಡರ್ ಪ್ರಕಟಣೆಯನ್ನು ರದ್ದುಗೊಳಿಸುವ ಹಕ್ಕನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹೊಂದಿರುತ್ತಾರೆ. |
| 13. | ತಿದ್ದುಪಡಿ / ಬದಲಾವಣೆ ಇತ್ಯಾದಿಗಳಿದ್ದರೆ ಪ್ರಕಟಿಸಲಾಗುವುದು. |
| 14. | ಹೆಚ್ಚಿನ ವಿವರಗಳನ್ನು ಈ ಕಛೇರಿಯ ವೇಳೆಯಲ್ಲಿ ಪಡೆಯಬಹುದು. |
| 15. | ತುಂಬಿದ ಆರ್ಥಿಕ ಮತ್ತು ತಾಂತ್ರಿಕ ಬಿಡ್‌ಗಳನ್ನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಕಛೇರಿ, ಬಿ ಡಿ ಸಿ ಸಿ |

| | |
|---|---|
| | ಬ್ಯಾಂಕ್ ನಿ. ಹೊಸಪೇಟೆ ಇಲ್ಲಿ ಸಲ್ಲಿಸಬೇಕು. |
| 16. | ಮೊದಲು ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಸದರಿ ಬಿಡ್ ಒಪ್ಪಿಗೆಯಾದಲ್ಲಿ ಮಾತ್ರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. |
| 17. | ಸದರಿ ಕಾಮಗಾರಿಯನ್ನು ಕೈಗೊಳ್ಳಲು ಬ್ಯಾಂಕಿನಿಂದ ಯಾವುದೇ ಮುಂಗಡ ಹಣ ನೀಡುವುದಿಲ್ಲ. ಕಾಮಗಾರಿಯನ್ನು ಪರಿಶೀಲಿಸಿ ಅಭಿಯಂತರರು ಹಾಗೂ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಿಕ ಅಭಿಯಂತರರಿಂದ ಅನುಮೋದನೆಗೊಳಪಟ್ಟು ಹಂತ ಹಂತವಾಗಿ ಬಿಡುಗಡೆ ಮಾಡಲಾಗುವುದು. |
| 18. | ಭವಿಷ್ಯ ನಿಧಿ ರಿಜಿಸ್ಟ್ರೇಷನ್ ಹೊಂದಿರುವ ಗುತ್ತಿಗೆದಾರರು ಆಗಿರತಕ್ಕದ್ದು |
| 19. | ಮೂಲ ಧರಪಟ್ಟಿಯು ಜಿ.ಎಸ್.ಟಿ ಸಹ ಒಳಗೊಂಡಿರುತ್ತದೆ. |

ಸಹಿ : – – –

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಬಳ್ಳಾರಿ ಡಿ.ಸಿ.ಸಿ.ಬ್ಯಾಂಕ್ ನಿ. ಹೊಸಪೇಟೆ.

ಸಹಿ : – – –

ಅಧ್ಯಕ್ಷರು
ಬಳ್ಳಾರಿ ಡಿ.ಸಿ.ಸಿ.ಬ್ಯಾಂಕ್ ನಿ. ಹೊಸಪೇಟೆ

**ಪ್ರತಿಯನ್ನು ಆದರ ಪೂರ್ವಕವಾಗಿ ಮಾಹಿತಿಗಾಗಿ ಮತ್ತು ಪ್ರಚಾರಾರ್ಥವಾಗಿ :**

01. ಕನ್ನಡ ಪ್ರಭಾ ಮತ್ತು ಸಂಜೆವಾಣಿ ದಿನ ಪತ್ರಿಕೆಯಲ್ಲಿ ಪ್ರಕಟಿಸಲು
02. ಕಛೇರಿಯ ಸೂಚನಾ ಫಲಕಕ್ಕೆ
03 ಬ್ಯಾಂಕಿನ ವೆಬ್ ಸೈಟ್ www.ballaridccbank.com ನಲ್ಲಿ ಪ್ರಕಟಿಸಲಾಗುವುದು.